"ಈಗ ಜ್ಞಾನೋದಯಕ್ಕೆ ಕಾರಣ?" ನಾಗೇಶ್ ವ್ಯಂಗ್ಯವಾಗಿ ಪ್ರಶ್ನಿಸಿದ.

"ಇವತ್ತು ಮತ್ತೆ ಜಗಳ ಮಾಡಿ ಮಗಳನ್ನು ಕಸ್ಟಡಿಗೆ ಕೊಡುವುದಿಲ್ಲ ಅಂತ ಗಲಾಟೆ ಮಾಡಿದಳು."

"ಅಂದರೆ ನವಮಿ, ಚೇತನ್‌ಕುಮಾರನನ್ನು ಕೊಲೆ ಮಾಡಿದ್ದಾಳಾ?" ನಾಗೇಶ್ ಪ್ರಶ್ನಿಸಿದ.

"ಅದೇನೋ ನನಗೆ ಗೊತ್ತಿಲ್ಲ ಸರ್. ಅಂದು ಅವಳೇನೊ ಅಪಾಯದಲ್ಲಿ ಇದ್ದಾಳೆ ಅಂತ ಗೊತ್ತಾಯಿತು. ಅದೇನು ಅಂತ ಅವಳು ಹೇಳಲಿಲ್ಲ. ಈಗ ನನಗೆ ನನ್ನ ಮಗಳ ಕಸ್ಟಡಿ ಬೇಕು. ನಾನು ನಿಜ ಹೇಳಿದ್ದೀನಿ. ನೀವು ಅವಳನ್ನ ಅರೆಸ್ಟ್ ಮಾಡಿದರೆ, ನಾನು ನನ್ನ ಮಗಳನ್ನು ಲೀಗಲ್ ಆಗಿ ಕಸ್ಟಡಿಗೆ ತೆಗೆದುಕೊಳ್ಳಬಹುದು..."

ನಾಗೇಶ್ ಕೊಂಚ ಯೋಚಿಸಿ,

"ನವಮಿ ನಿಮ್ಮ ಬಳಿಗೆ ಬಂದಾಗ ಅವರ ಎಡಗೈಗೆ ಏನಾದರೂ ಗಾಯ ಆಗಿತ್ತಾ?"

"ಎಡಗೈಗೆ ಅಲ್ಲ, ಬಲಗೈಗೆ ಗಾಯ ಆಗಿತ್ತು. ವೇಲ್ ಕಟ್ಟಿಕೊಂಡಿದ್ದಳು. ಕೇಳಿದರೆ ಹೊರಡುವಾಗ ಮನೆಯಲ್ಲಿ ಚಾಕುವಿನಿಂದ ಕೈ ಕುಯ್ದುಕೊಂಡೆ ಅಂದಳು."

"ನೀವು ಹೇಳುವುದು ನಂಬುವುದು ಹೇಗೆ?" ನಾಗೇಶ್ ಮತ್ತೆ ಪ್ರಶ್ನಿಸಿದ.

"ನಂಬುವುದು ಬಿಡುವುದು ನಿಮಗೆ ಬಿಟ್ಟ ವಿಚಾರ. ನಾಳೆ ಬೇರೆ ಎಲ್ಲಾದರೂ ಸಾಕ್ಷಿ ಹೇಳುವ ಪ್ರಸಂಗ ಬಂದರೆ, ನಾನು ಹೇಳುವ ಸತ್ಯ ಇದೇ."

ರಾಜೇಶ್ ಎದ್ದು ಹೋದ ಎಷ್ಟೋ ಹೊತ್ತು ನಾಗೇಶ್ ಯೋಚಿಸುತ್ತಿದ್ದ.

'ರಾಜೇಶನ ಹೇಳಿಕೆ ನಿಜವೆಂದೇ ನಂಬಿದರೂ ಅದು ನವಮಿ ಕೊಲೆ ಮಾಡಿದ್ದಾಳೆ ಎನ್ನುವುದನ್ನಾಗಲೀ ಅಥವಾ ನವಮಿ ಕ್ರೈಂ ಸೀನ್‌ನ ಬಳಿ ಇದ್ದಳು ಎನ್ನುವುದಾಗಲೀ ಪ್ರೂವ್ ಮಾಡುವುದಿಲ್ಲ. ನವಮಿಯ ಮೆಸೇಜ್, ಅವಳ ಗಾಯ, ಅವಳು ನಮಗೆ ಸುಳ್ಳು ಹೇಳಿದ್ದು, ಎಲ್ಲವೂ ಪೂರಕ ಸಾಕ್ಷಿಗಳು ಅಷ್ಟೇ... ನವಮಿಗೆ ಚೇತನ್‌ಕುಮಾರನನ್ನು ಕೊಲೆಮಾಡುವ ಮೋಟಿವ್ ಕೂಡಾ ಎಸ್ಟಾಬ್ಲಿಶ್ ಆಗಿಲ್ಲ. ನವಮಿ ಕ್ರೈಂ ಸೀನ್‌ನಲ್ಲಿ ಇದ್ದಳು ಎನ್ನುವುದಕ್ಕೆ ಸಿಗಬಹುದಾದ ಒಂದೇ ಸಾಕ್ಷಿ ಅವಳ ರಕ್ತದ ಡಿಎನ್‌ಎ ಮ್ಯಾಚಿಂಗ್. ಅದು ಸರಿಯಾದರೆ ಮಾತ್ರ ಎಲ್ಲ ಕೊಂಡಿಗಳೂ ಕೂಡಿಕೊಳ್ಳುತ್ತವೆ!'

★★★

"ಸರ್ ಡಿಎನ್‌ಎ ರಿಪೋರ್ಟ್ ಬಂತು..."

ನಾಗೇಶ್ ಉತ್ಸಾಹದಿಂದ ರಿಪೋರ್ಟ್ ತಂದಿದ್ದ ಸುರೇಶನ ಕಡೆ ನೋಡಿದ. ಅವನ ಮುಖದಲ್ಲಿ ಅದೇ ಉತ್ಸಾಹ ಕಾಣಲಿಲ್ಲ.

"ಸರ್, ಪೂರ್ತಿ ಮ್ಯಾಚ್ ಮಾಡಕ್ಕೆ ಆಗಲಿಲ್ಲ. ಸುಮಾರು ಅರ್ಧದಷ್ಟು ಮ್ಯಾಚ್ ಆಗಿದೆ ಅಷ್ಟೇ..."

"ಹಾಗಾದ್ರೆ ಕ್ರೈಂ ಸೀನ್‌ನಲ್ಲಿ ಸಿಕ್ಕ ಸ್ಯಾಂಪಲ್ ನವಮಿಯದ್ದೇ ಅಂತ ಅನುಮಾನ ಪಡಬಹುದು ಅಷ್ಟೇ. ಈಗಿರುವ ಕಾನೂನಿನ ಪ್ರಕಾರ ಡಿಎನ್‌ಎ ಟೆಸ್ಟ್ ಕೋರ್ಟ್‌ನಲ್ಲಿ ಸಾಕ್ಷಿ ಅಂತ ಪರಿಗಣಿಸಲೇಬೇಕು ಅಂತಿಲ್ಲ. ಅದು ನ್ಯಾಯಾಲಯದ ಪರಿಧಿಗೆ ಸೇರಿದ್ದು. ಹಾಗೆ ಪರಿಗಣಿಸಿದರೂ ಅದು ಪೂರಕ ಸಾಕ್ಷಿ ಆಗುತ್ತದೆಯೇ ಹೊರತು, ಕ್ಲಿಂಚಿಂಗ್ ಎವಿಡೆನ್ಸ್ ಅಂತ ತೋರಿಸಕ್ಕೆ ಆಗುವುದಿಲ್ಲ. ನಾವು ನಮಗೆ ಕನ್ವಿನ್ಸ್ ಆಗುವ ಸಾಕ್ಷಿ ಹುಡುಕಿದರೆ ಸಾಲದು ಸುರೇಶ್, ನ್ಯಾಯಾಲಯ ಕನ್ವಿನ್ಸ್ ಆಗುವ ಸಾಕ್ಷಿ ಹುಡುಕಬೇಕು."

"ಅಂದರೆ ಮತ್ತೊಮ್ಮೆ ಡೆಡ್ ಎಂಡ್‌ಗೆ ಬಂದೆವಾ ಸಾರ್?"

"ಗೊತ್ತಿಲ್ಲ ಸುರೇಶ್... ಯಾರೋ ನಮ್ಮನ್ನು ಮಿಸ್ ಲೀಡ್ ಮಾಡ್ತಾ ಇದ್ದಾರೆ. ಅದು ಕೊಲೆ ಮಾಡಿದವರಾ ಅಥವಾ ಮಾಡಿದವರನ್ನು ಬಚಾವ್ ಮಾಡುತ್ತಿರುವವರಾ ಗೊತ್ತಾಗುತ್ತಿಲ್ಲ..."